# ಬದುಕು ಬಣ್ಣದ ಮಾಯೆ



ಬದುಕು ಕುರಿತು ಯೋಚಿಸ ಹೋದಾಗೆಲ್ಲ ಅದೇಕೋ ಮೊದಲು ಕಣ್ಣೆದುರು ಥರಾವರಿ ಬಣ್ಣಗಳ ಕುಣಿತದ ಅನುಭವ. ಜೊತೆಗೆ ಹಿನ್ನೆಲೆ ಗಾಯನದಂತೆ ಸಿನಿ ಹಾಡುಗಳ ನೆನಪು. 'ಬಣ್ಣ ನನ್ನ ಒಲವಿನ ಬಣ್ಣ' ಬಿಟ್ಟರೆ 'ಬದುಕಿನ ಬಣ್ಣವೆ ಬದಲಾದರೆ...'. ನನಗೇನು ಸಿನಿಮಾ ಗೀಳಿಲ್ಲ, ಇದೆಲ್ಲ ಯಾವಾಗಲೋ ಕೇಳಿಸಿಕೊಂಡು ಸುಪ್ತ ಪ್ರಜ್ಞೆಯಲ್ಲಡಗಿದ ಫಸಲು. ನಮ್ಮಲ್ಲಿ ಲಾಗಾಯ್ತಿನಿಂದಲೂ ನಾಟಕ, ಸಿನಿಮಾಗಳನ್ನು ಬಣ್ಣದ ಲೋಕವೆಂದೂ, ಅದರ ಪಾತ್ರಧಾರಿಗಳದು ಬಣ್ಣದ ಬದುಕೆಂದೂ ಭಾವನೆಯಿದೆ. ಅಭಿನಯದ ಹೊತ್ತು ಪಾತ್ರಧಾರಿಗಳು ಬಣ್ಣ ಬಳಿದುಕೊಳ್ಳುವ ಉದ್ದೇಶವೇ ರಂಗಭೂಮಿಯಲ್ಲೊಂದು ಪ್ರತಿಲೋಕದ ನಿರ್ಮಾಣ. ಇದು ವಾಸ್ತವಕ್ಕಿಂತ ಭಿನ್ನವೆಂಬ ಕಲ್ಪನೆಯು ಪ್ರೇಕ್ಷಕರಲ್ಲಿ ಮೂಡಿ ಮನೋಲ್ಲಾಸ ಸಾಧ್ಯವಾಗಬೇಕಲ್ಲವೇ? ಆಗಲೇ ಈ ಕಲೆಯ ಸಾರ್ಥಕತೆ. ಆದರೀಗ ಬಣ್ಣವು ಬಣ್ಣವಾಗಿ ಉಳಿಯದೆ ಮೇಕಪ್ ಆಗಿ ಮಾಗಿದೆ. ಅಷ್ಟಕ್ಕೂ ಬಣ್ಣಗಳು ಕೇವಲ ನಾಟಕ, ಸಿನಿಮಾಗಳಿಗೆ ಮೀಸಲಲ್ಲ. ಅಲ್ಲಿ ಅವುಗಳದು ಹೈಪ್ರೊಫೈಲ್ ಇರಬಹುದು. ಆದರೆ ಲೊ ಪ್ರೊಫೈಲ್‌ನಲ್ಲಾದರೂ ಸಾಹಿತ್ಯಕ್ಕೆ ಉಂಟು ಇದರ ನಂಟು. ರೀತಿ, ಅಭಿವ್ಯಕ್ತಿ, ವಿಧಾನ ಬೇರೆ ಅಷ್ಟೆ. ಇಲ್ಲವಾದರೆ ಪ್ರಸಿದ್ಧ ಕವಿ ಗೋಪಾಲಕೃಷ್ಣ ಅಡಿಗರು 'ನನ್ನ ನುಡಿ' ಕವನದಲ್ಲಿ ಹೀಗೆನ್ನುತ್ತಿದ್ದರೆ?

ಬಗೆಯೊಳಗನೇ ತೆರೆದು
ನನ್ನ ನುಡಿಯೊಳೇ ಬಣ್ಣ ಬಣ್ಣದಲಿ ಬಣ್ಣಿಸುವ
ಪನ್ನತಿಕೆ ಬರುವನಕ ನನ್ನ ಬಾಳಿದು ನರಕ

ತಮ್ಮದೇ ನುಡಿಯಲ್ಲಿ ಬಣ್ಣ ಬಣ್ಣದಲ್ಲಿ ಬಣ್ಣಿಸುವುದೇ ಹಿರಿಮೆ ಎಂದು ಇದರ ಅರ್ಥವಲ್ಲವೇ?

ಕಲೆಗಳಾಯಿತು, ಪ್ರಕೃತಿ ಮತ್ತು ಮನುಷ್ಯ ಜೀವನದಲ್ಲೂ ಬಣ್ಣದ್ದೇ ನಿರ್ಣಾಯಕ ಪಾತ್ರ. ಅಧ್ಯಾತ್ಮ ಚಿಂತಕರೂ, ವೇದಾಂತಿಗಳೂ 'ಜಗತ್ತೊಂದು ನಾಟಕರಂಗ (ಬೇಕಾದರೀಗ ಸಿನಿಮಾರಂಗ), ಜೀವಿಗಳೆಲ್ಲ ಪಾತ್ರಧಾರಿಗಳು' ಎಂದಿದ್ದಾರೆ (ಸೂತ್ರಧಾರನ ಮಾತು ಸದ್ಯ ಬೇಡ). ಪಾತ್ರಧಾರಿಗಳೆಂದರೆ ಬಣ್ಣ ಹಚ್ಚಿಕೊಳ್ಳಲೇಬೇಕು. ಯಾವ ಬಗೆಯಲ್ಲಾದರೂ ಸರಿಯೇ. ಅಂದರೆ ದೈಹಿಕ–ಮಾನಸಿಕ ಇತ್ಯಾದಿ. ಅದಕ್ಕೆಂದೇ ಎಷ್ಟೊಂದು ಬ್ಯೂಟಿ ಪಾರ್ಲರ್‌ಗಳು ತಲೆ ಎತ್ತುತ್ತಿವೆ. ಆದರೂ ಅವುಗಳ ದರಪಟ್ಟಿ, ಗುಣಮಟ್ಟ, ಹಳ್ಳಿ–ಪಟ್ಟಣಗಳ ಅವಗಣನೆ ಇದನ್ನೆಲ್ಲಾ ಮನಗಂಡ ನಾಗರಿಕರು ಹೆಚ್ಚು ಹುಷಾರಾಗತೊಡಗಿದ್ದಾರೆ. ಬಣ್ಣವಿಲ್ಲದೆ ನಟಿಸಬಲ್ಲ ಚಾತುರ್ಯ, ವಿಶಾರದಗಳನ್ನು ಆವಾಹಿಸಿಕೊಳ್ಳುವ ಮೂಲಕ.

ಬಣ್ಣವೆಂದೊಡನೆ ಮೊದಲು ಅರಿವಿಗೆ ಬರುವುದೇ ಮನುಷ್ಯರ ಮೈಬಣ್ಣ. ಸಮಾಜದಲ್ಲಿ ಈಗಲೂ ಸೌಂದರ್ಯಕ್ಕೂ, ಮೈಬಣ್ಣಕ್ಕೂ ತಳುಕು ಹಾಕಲಾಗಿದೆ. ಬಿಳಿ, ಕೆಂಪು, ಗೋಧಿಕೆಂಪು, ಚಿನ್ನದ ಬಣ್ಣ, ಇವೆಲ್ಲ ಒಂದಾದರೆ, ಸಾದಾಗೆಂಪು, ಸಾದಾಗಪ್ಪು, ಕಪ್ಪು ಇವುಗಳದೊಂದು ಬಗೆ. ಈ ಬಣ್ಣಗಳ ಆಧಾರದಿಂದಲೇ ಸೌಂದರ್ಯವನ್ನು ಅಳೆಯುವುದುಂಟು. ಹಿರಿಯ ಸಮಾಜವಾದಿ ಚಿಂತಕರೂ ಬಹುಶ್ರುತರೂ ಆದ ರಾಮ ಮನೋಹರ್ ಲೋಹಿಯಾ 'ಸೌಂದರ್ಯ ಮತ್ತು ಮೈಬಣ್ಣ' ಎಂಬ ಲೇಖನವನ್ನೇ ಬರೆದಿದ್ದಾರೆ. ಈಗಲೂ ನಮ್ಮ ಸಮಾಜದಲ್ಲಿ ಸ್ಥೂಲವಾಗಿ ಬಿಳಿ ಮತ್ತು ಅದರ ಸಹಚರಿ ಮೈಬಣ್ಣಕ್ಕೆ ಅಗ್ರಸ್ಥಾನ. ಇದು ವಸಾಹತುಶಾಹಿ ಕಾಲಘಟ್ಟದ ಕಾಣ್ಕೆ ಇರಬೇಕು. ನಮ್ಮ ಪ್ರಾಚೀನ ಕಾವ್ಯ–ಪುರಾಣ ಗ್ರಂಥಗಳಲ್ಲಿ ವ್ಯಕ್ತವಾಗುವ ವಿಚಾರವಾದರೋ ಇದಕ್ಕೆ ವ್ಯತಿರಿಕ್ತ. ಶ್ರೀಕೃಷ್ಣ ಇಂದಿಗೂ ಅತ್ಯಂತ

> ಬಣ್ಣಗಳು ಮನುಷ್ಯರಿಗಷ್ಟೇ ಸೀಮಿತವಲ್ಲ. ಮರ, ಗಿಡ, ಬಳ್ಳಿ, ಹುಲ್ಲು, ಧಾನ್ಯಗಳು, ಹಣ್ಣು ಕಾಯಿಗಳು, ಹೂಗಳು, ಕ್ರಿಮಿ ಕೀಟ, ದುಂಬಿಯ ಜಾತಿಯವು, ಸರೀಸೃಪ, ಮೀನು, ಪಶು–ಪಕ್ಷಿ, ಮೃಗಗಳು, ಕೊನೆಗೆ ಸಮಸ್ತ ಜೀವಜಂತುಗಳು. ಇವೆಲ್ಲಕ್ಕೂ ಆಶ್ರಯವಾದ ಭೂಮಿಯ ಮಣ್ಣಿಗೂ ಸಹ ಬಣ್ಣವಿದೆ. ಇಲ್ಲೆಲ್ಲಾ ಕಾಣುವುದು ಬರೀ ಬಣ್ಣವಲ್ಲ, ಬಣ್ಣ ಬಣ್ಣದ ಚಿತ್ತಾರ!